ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: : 985

ಸದಸ್ಯರ ಹೆಸರು : ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 12-03-2020

ಉತ್ತರಿಸುವವರು : ಮಾನ್ಯ ಮುಖ್ಯ ಮಂತ್ರಿಗಳು

ಕ್ರ.ಸಂ.	ಪ್ರಶ್ನೆ	ಉತ್ತರ
1	ಸರ್ಕಾರವು ಶ್ರೀ ಜಗದ್ಗುರು ಬಸವಣ್ಣನವರ ಭಾವಚಿತ್ರವನ್ನು ಸರ್ಕಾರಿ ಕಛೇರಿಯಲ್ಲಿ ಅಳವಡಿಸಲು ಯಾವ ದಿನಾಂಕದಿಂದ ಆದೇಶ ಹೊರಡಿಸಲಾಗಿದೆ; ಪ್ರತಿಯನ್ನು ನೀಡುವುದು;	ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ:11:ರಾರಾಅ:2017 ದಿನಾಂಕ: 27-04-2017 ರಲ್ಲಿ ಬಸವ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸುವ ಸಂದರ್ಭದಲ್ಲಿ ಶ್ರೀ ಜಗದ್ಗುರು ಬಸವೇಶ್ವರ ರವರ ಭಾವಚಿತ್ರವನ್ನು ಸರ್ಕಾರದ ಎಲ್ಲಾ ಕಛೇರಿಗಳಲ್ಲಿ ಕಡ್ಡಾಯವಾಗಿ ಪ್ರದರ್ಶಿಸಬೇಕೆಂದು ಆದೇಶಿಸಲಾಗಿದೆ. (ಸುತ್ತೋಲೆಯ ಪ್ರತಿ ಲಗತ್ತಿಸಿದೆ)
2	ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಇನ್ನೂ ಬಸವಣ್ಣನವರ ಭಾವಚಿತ್ರವನ್ನು ಪೂರ್ತಿಯಾಗಿ ಅಳವಡಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಇಲ್ಲ
3	ಬಂದಿದ್ದರೆ, ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಬಸವಣ್ಣನವರ ಭಾವಚಿತ್ರವನ್ನು ಕಡ್ಡಾಯವಾಗಿ ಅಳವಡಿಸುವಂತೆ ಯಾವಾಗ ನಿರ್ದೇಶನ ನೀಡಲಾಗುವುದು;	ಉದ್ಭವಿಸುವುದಿಲ್ಲ
4	ಈ ಸಂಬಂಧ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರವಾದ ಮಾಹಿತಿ ನೀಡುವುದು)	ಉದ್ಭವಿಸುವುದಿಲ್ಲ

ಕಡತ ಸಂಖ್ಯೆ: ಸಿಆಸುಇ 30 ರಾಸ 2020

ಬಿ.ಎಸ್. ಯಡಿಯೂರಪ್ಪ

[ಬಿ.ಎಸ್. ಯಡಿಯೂರಪ್ಪ]

ಮುಖ್ಯಮಂತ್ರಿ

ಕರ್ನಾಟಕ ಸರ್ಕಾರ

ಸಂಖ್ಯೆ:ಸಿಆಸುಇ:11:ರಾರಾಅ:2017

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ,
ಬೆಂಗಳೂರು, ದಿನಾಂಕ:27-04-2017.

ಸುತ್ತೋಲೆ

ವಿಷಯ: ಸರ್ಕಾರದ ಕಛೇರಿಗಳಲ್ಲಿ ದಿನಾಂಕ:29-04-2017ರಂದು **"ಬಸವ ಜಯಂತಿ"**ಯನ್ನು ಆಚರಿಸುವ ಬಗ್ಗೆ.

ಹನ್ನೆರಡನೇ ಶತಮಾನದ ಸಮಾಜ ಸುಧಾರಕರಾದ ಜಗಜ್ಯೋತಿ ಬಸವೇಶ್ವರರವರು ತಮ್ಮ ವಚನಗಳ ಮೂಲಕ ಮೂಢ ನಂಬಿಕೆ, ಕಂದಾಚಾರ ಹಾಗೂ ಸಮಾಜದ ಲೋಪದೋಷಗಳನ್ನು ತಿದ್ದುವಲ್ಲಿ ಬಹುವಾಗಿ ಶ್ರಮಿಸಿರುವ ಹಿನ್ನೆಲೆಯಲ್ಲಿ, ಪ್ರತಿ ವರ್ಷದಂತೆ ಈ ವರ್ಷವೂ ಸಹ ದಿನಾಂಕ:29-04-2017ರಂದು **"ಬಸವ ಜಯಂತಿ"**ಯನ್ನು ಆಚರಿಸಲಾಗುತ್ತಿದೆ. ಬಸವ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸುವ ಈ ಸಂದರ್ಭದಲ್ಲಿ, ಜಗಜ್ಯೋತಿ ಬಸವೇಶ್ವರರವರ ಭಾವಚಿತ್ರವನ್ನು ಸರ್ಕಾರದ ಎಲ್ಲಾ ಕಛೇರಿಗಳಲ್ಲಿ ಕಡ್ಡಾಯವಾಗಿ ಪ್ರದರ್ಶಿಸಬೇಕೆಂದು ಈ ಮೂಲಕ ಕೋರಲಾಗಿದೆ.

ಭಾವಚಿತ್ರದ ಪ್ರತಿಗಳನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಪಡೆದುಕೊಳ್ಳುವಂತೆ ಈ ಮೂಲಕ ಸೂಚಿಸಲಾಗಿದೆ.

ಕೆ. ಎಸ್. ರೋಹಿಣಿ.
(ಕೆ.ಎಸ್. ರೋಹಿಣಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ರಾಜಕೀಯ).

ಇವರಿಗೆ:

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
2. ಮಾನ್ಯ ರಾಜ್ಯಪಾಲರ ವಿಶೇಷ ಕಾರ್ಯದರ್ಶಿ, ರಾಜಭವನ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿಗಳು
4. ಕಾರ್ಯದರ್ಶಿ, ವಿಧಾನಸಭಾ ಸಚಿವಾಲಯ, ವಿಧಾನಸೌಧ, ಬೆಂಗಳೂರು.
5. ಕಾರ್ಯದರ್ಶಿ. ವಿಧಾನಪರಿಷತ್ತು ಸಚಿವಾಲಯ, ವಿಧಾನಸೌಧ, ಬೆಂಗಳೂರು.
6. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
7. ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು.
8. ಮಾನ್ಯ ಸಚಿವರುಗಳ ಎಲ್ಲಾ ಆಪ್ತ ಕಾರ್ಯದರ್ಶಿಗಳು
9. ಎಲ್ಲಾ ಪ್ರಾದೇಶಿಕ ಆಯುಕ್ತರುಗಳು
10. ಎಲ್ಲಾ ಜಿಲ್ಲಾಧಿಕಾರಿಗಳು/ಪೋಲೀಸ್ ಅಧೀಕ್ಷಕರು
11. ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್‌ಗಳು
12. ಎಲ್ಲಾ ಇಲಾಖಾ ಮುಖ್ಯಸ್ಥರುಗಳು,
13. ಶಾಖಾ ರಕ್ಷಾ ಕಡತ ಮತ್ತು ಹೆಚ್ಚುವರಿ ಪ್ರತಿಗಳು.